ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು).—

ಅ) ೧. ಟ್ರಾಕ್ಟರ್‌ಗಳ ಸಂಖ್ಯೆ : ೫೬,೨೦೨
೨. ಟ್ರಾಕ್ಟರ್–ಟ್ರೇಲರ್‌ಗಳ ಸಂಖ್ಯೆ : ೫೮,೫೪೧

ಆ) ೧. ಟ್ರಾಕ್ಟರ್‌ಗಳ ಸಂಖ್ಯೆ : ೨೦,೪೬೭
೨. ಟ್ರಾಕ್ಟರ್–ಟ್ರೇಲರ್‌ಗಳ ಸಂಖ್ಯೆ : ೫೧,೦೯೧

ಇ) ಟ್ರಾಕ್ಟರ್ ಟ್ರೇಲರ್‌ಗಳ ನೋಂದಣಿ ಮಾಡುವಲ್ಲಿ ತಿಳಿಸಿರುವಂತೆ ಯಾವುದೇ ಸಮಸ್ಯೆಯಿರುವುದಿಲ್ಲ. ಅರ್ಜಿಗಳನ್ನು ಸರಿಯಾದ ಕ್ರಮದಲ್ಲಿ ಭರ್ತಿ ಮಾಡಿ ನಿಗದಿಪಡಿಸಿದ ಶುಲ್ಕ ಮತ್ತು ತೆರಿಗೆ ಪಾವತಿ ಮಾಡಿದಲ್ಲಿ ತ್ವರಿತವಾಗಿ ವಾಹನದ ನೋಂದಣಿ ಮಾಡಲು ಕ್ರಮ ಕೈಗೊಳ್ಳಲಾಗುವುದು. ಟ್ರಾಕ್ಟರ್ ಟ್ರೇಲರ್‌ಗಳ ನೋಂದಣಿ ಸೇರಿದಂತೆ ಇತರೆ ಎಲ್ಲ ಕೆಲಸ ಕಾರ್ಯಗಳಿಗೆ ಪದೇ ಪದೇ ಕಛೇರಿಗೆ ಬರುವುದನ್ನು ತಪ್ಪಿಸಲು ಟ್ರಾಕ್ಟರ್ ಟ್ರೇಲರ್ ಮತ್ತು ಇತರೆ ವಾಹನಗಳ ಮಾಲೀಕರು ಹಾಗೂ ಸಾರ್ವಜನಿಕರಿಗೆ ಮಾರ್ಗದರ್ಶನ ನೀಡಲು ಪ್ರತಿಯೊಂದು ಕಛೇರಿಯಲೂ ವ್ಯವಸ್ಥೆ ಮಾಡಲಾಗಿದೆ. ವ್ಯವಸಾಯಕ್ಕಾಗಿ ಬಳಸುವ ಟ್ರಾಕ್ಟರ್ ಟ್ರೇಲರ್‌ಗಳಿಗೆ ತೆರಿಗೆ ಪಾವತಿ ಮಾಡಲು ಅನುವಾಗುವಂತೆ ಜೀವಾವಧಿ ತೆರಿಗೆಯನ್ನು ವಿಧಿಸಲಾಗುತ್ತದೆ. ಇತ್ತೀಚೆಗೆ ಕೃಷಿ ಬಳಕೆಯ ಟ್ರಾಕ್ಟರ್–ಟ್ರೇಲರ್‌ಗಳನ್ನು ಸಾರಿಗೇತರ ವಾಹನಗಳೆಂದು ವ್ಯಾಖ್ಯಾನಿಸಿದ್ದು, ಅದರಂತೆ ಇಲಾಖೆಯ ಅಧೀನ ಕಛೇರಿಗಳಿಗೆ ಸುತ್ತೋಲೆಯನ್ನು ಹೊರಡಿಸಿ ಸೂಕ್ತ ಕ್ರಮವನ್ನು ಜರುಗಿಸುವಂತೆ ತಿಳಿಸಲಾಗಿದೆ.

I & II ದರ್ಜೆ ಹುದ್ದೆಗಳಿಗೆ ನೇರ ನೇಮಕಾತಿ

೨೬೧ (ಅಗಿ) ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ (ಬೇಲೂರು).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಪ್ರತಿಭಾವಂತ ಪದವೀಧರರಿಗೆ ದರ್ಜೆ ಒಂದು ಮತ್ತು ಎರಡುಗಳಿಗೆ ನೇರ ನೇಮಕಾತಿ ಆದೇಶ ಯಾವಾಗ ಹೊರಡಿಸಲಾಯಿತು ?

ಆ) ಇದುವರೆಗೆ ಯಾವ ಯಾವ ವರ್ಷಗಳಲ್ಲಿ ಎಷ್ಟು ಜನಕ್ಕೆ ದರ್ಜೆ ಒಂದು ಮತ್ತು ಎರಡು ಹುದ್ದೆಗಳಿಗೆ ನೇರ ನೇಮಕಾತಿ ಮಾಡಲಾಗಿದೆ ?

ಇ) ನೇರ ನೇಮಕಾತಿಯಾದ ಅಭ್ಯರ್ಥಿಗಳೆಲ್ಲರೂ ಸರಕಾರಿ ಸೇವೆಗೆ ಸೇರಿದ್ದಾರೆಯೆ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು).—

ಅ) ದಿನಾಂಕ ೧೧–೪–೧೯೮೫ ರಂದು ಸಿಯಮಗಳನ್ನು ಜಾರಿಗೆ ತರಲಾಯಿತು.

ಆ)

೧೯೮೨–೮೩		೧೯೮೩–೮೪	
ದರ್ಜೆ–೧	ದರ್ಜೆ–೨	ದರ್ಜೆ–೧	ದರ್ಜೆ–೨
೧೫	೨೯	೧	೬

ಇ) ೧೯೮೨–೮೩ನೇ ಸಾಲಿನವರು ನೇಮಕ ಗೊಂಡಿರುತ್ತಾರೆ.
೧೯೮೩–೮೪ನೇ ಸಾಲಿನ ನೇಮಕಾತಿ ಪ್ರಕ್ರಿಯೆಗೆ ಸಂಬಂಧವಾಗಿ ಪೂರ್ವ ತನಿಖಾ ಕಾರ್ಯವು ಜಾರಿಯಲ್ಲಿದೆ. ಜಿಲ್ಲಾ ಮಾರುಕಟ್ಟೆ ಅಧಿಕಾರಿ ಹುದ್ದೆಗೆ ನೇಮಕಾತಿ ಆದೇಶ ಹೊರಡಿಸಿದೆ.

ಸರ್ಕಾರಿ ಸ್ವಾಮ್ಯದ ಉದ್ದಿಮೆಗಳಲ್ಲಿ ಕನ್ನಡ ಬಳಕೆ ಜಾರಿ

೨೬೬ (ಜಿಆ೧) ಶ್ರೀ ಬಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ).—ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ರಾಜ್ಯದಲ್ಲಿರುವ ಸರ್ಕಾರಿ ಸ್ವಾಮ್ಯದ ಉದ್ಯಮಿಗಳಲ್ಲಿ ದಿನನಿತ್ಯದ ಆಡಳಿತದಲ್ಲಿ ಕನ್ನಡ ಬಳಕೆಯಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಆ ಉದ್ಯಮಿಗಳಲ್ಲಿ ಕನ್ನಡ ಬಳಕೆಯ ಉಸ್ತುವಾರಿಗಳನ್ನು ನೋಡಿಕೊಳ್ಳಲು ಸರ್ಕಾರ ಒಂದು ವಿಶೇಷ ಸೆಲ್‌ನ್ನು ಸ್ಥಾಪಿಸುತ್ತದೆಯೇ ?

ಇ) ಕನ್ನಡ ಅಭಿವೃದ್ಧಿ ಪ್ರಾಧಿಕಾರ ಆ ಬಗ್ಗೆ ಕೈಗೊಂಡಿರುವ ಕ್ರಮಗಳೇನು ?